**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 1006/2021**

**ಸಿಡಬ್ಲು ಃ 1**

**ಪಿಡಬ್ಲು ಃ 1**

**ಹೆಸರು** ಃ ತ್ರಿವಿಕ್ರಮ ಭಾಸ್ಕರಪ್ಪ ಮನುವಾಚಾರ್ಯ

**ವಯಾ** ಃ 37 ವರ್ಷ

**ಉದ್ಯೋಗ** ಃ ಜಿಯೊಲಾಜಿಸ್ಟ

**ವಾಸ** ಃ ಬೆಳಗಾವಿ

**(ದಿನಾಂಕಃ 14-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

**1.** ನಾನು **2019** ರಿಂದ ಇಲ್ಲಿಯುವರೆಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆ , ಬೆಳಗಾವಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆನೆ.

**2.** ದಿನಾಂಕ **10-06-2021** ರಂದು ನನಗೆ ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ , ಬೆಳಗಾವಿ ಇವರ ಆದೇಶದ ಮೇರೆಗೆ ಹಿಡಕಲ್ ಡ್ಯಾಂನ ಹಿನ್ನೀರಿನ ಮೇಲೇ ಅಕ್ರಮವಾಗಿ ಮರಳು ಗಣಿಗಾಗಿಕೆ ಆಗುತ್ತಿರುವ ಬಗ್ಗೆ ದೂರಿನ ಹಿನ್ನೆಲೆಯಲ್ಲಿ ನಾನು ಮತ್ತು ನನ್ನ ಸಹೋದ್ಯೋಗಿಗಳಾದ ಸಲೀಂ ಮುಲ್ಲಾ , ವೆಂಕನಗೌಡಾ ಪಾಟಿಲ , ಸುಜೀತ ಕುಲಕರ್ಣಿ , ವಾಹನ ಚಾಲಕನಾರಾದ ಮೌಲಾಸಾಬ ಪಡಗಾರ ಎಲ್ಲರೂ ಕೂಡಿ **8-30** ರ ಬೆಳಿಗ್ಗೆ ಬೆಳಗಾವಿ ಬಿಟ್ಟು ನಮ್ಮ ಸರಕಾರಿ ಜೀಪ ಸಂಖ್ಯೆ ಕೆಎ-**22** ಜಿ-**0880** ರಲ್ಲಿ ಜಿನರಾಳ ಗ್ರಾಮದ ಹದ್ದಿನಲ್ಲಿ ಗಸ್ತು ಮಾಡುತ್ತ ನಂತರ ಚಿಲಭಾವಿ ಗ್ರಾಮದ ಹತ್ತಿರ ಬಂದಾಗ ಹಿಡಕಲ್ ಡ್ಯಾಂನ ಹಿನ್ನೀರಿನ ಪ್ರದೇಶದಲ್ಲಿ ಚಿಲಭಾವಿಯಿಂದ ಅರಳಿಕಟ್ಟೆಗೆ ಹೋಗುವಂತಹ ರಸ್ತೆಯಲ್ಲಿ ಅಲ್ಲಿ ಒಂದು ಮರಳು ತುಂಬಿದ ಟಿಪ್ಪರ ಲಾರಿ ನಮ್ಮ ಎದುರುಗಡೆಯಿಂದ ಬಂತು. ಸದರಿ ಲಾರಿಯನುನ ನಾವು ಬೆನ್ನಟಿ ಹಿಡಿದು , ಅದನ್ನು ಯಮಕನಮರಡಿ ಉಪ-ಪೊಲಿಸ ಠಾಣೆಗೆ ಒಪ್ಪಿಸಿದೆವು. ನಂತರ ಚಿಲಭಾವಿ ಗ್ರಾಮದ ಸರಹದ್ದಿನಲ್ಲಿ ಗಸ್ತು ತಿರುಗುತ್ತಿದ್ದಾಗ , ಅಲ್ಲಿ ಮರಳು ದಾಸ್ತಾನು ಇರುವುದು ಕಂತು ಬಂತು. ನಂತರ ನಾವು ಕಂದಾಯ ಇಲಾಖೆಯವರಿಗೆ ಫೋನ ಮಾಡಿ ಗ್ರಾಮ ಸಹಾಯಕರನ್ನು ಕರೆಸಿಕೊಂಡೆವು. ಆ ಮರಳನ್ನು ಪಿ ಡಬ್ಲೂ ಡಿ

ಇಲಾಖೆಯವರಿಗೆ ಹಸ್ತಾಂತರ ಮಾಡಿದೆವು. ಆ ಸಮಯದಲ್ಲಿ ಮಧ್ಯಾಹ್ನ 3-00 ಗಂಟೆ ಆಗಿತ್ತು . ಸದರಿ ಸ್ಥಳದಲ್ಲಿ ನಾವು ಇದ್ದಾಗ ಸುಮಾರು 10-15 ಜನ ಕೂಡಿಕೊಂಡು ಮುಖಕ್ಕೆ ಮಾಸ್ಕ ಹಾಕಿಕೊಂಡು ಕೈಯಲ್ಲಿ ಕಲ್ಲು ಮತ್ತು ಬಡಿಗೆಗಳನ್ನು ಹಿಡಿದುಕೊಂಡು ನಮ್ಮ ವಾಹನದ ಮೇಲೆ ಕಲ್ಲುಗಳನ್ನು ಒಗೆದರು. ಕೂಡಲೇ ನಾವು ಭಯದಿಂದ ಜೀಪನಲ್ಲಿ ಹತ್ತಿಕೊಂಡು ಹೋದೆವು. ಆಗ ಸದರಿ 10-15 ಜನ ಕೂಡಿಕೊಂಡು ಕಲ್ಲಿನಿಂದ ನಮ್ಮ ಜೀಪನ ಎರಡೂ ಎಡಭಾಗದ ಡೋರಿನ ಗ್ಲಾಸುಗಳನ್ನು ಹಾಗೂ ಹಿಂಬದಿಯ ಡೋರನ ಗ್ಲಾಸಗಳನ್ನು ಒಡೆದರು. ನಂತರ ನಾವುಗಳೆಲ್ಲರೂ ಯಮಕನಮರಡಿ ಪೋಲಿಸ ಠಾಣೆಗೆ ಬಂದು ಫಿರ್ಯಾದನ್ನು ಕೊಟ್ಟೆವು . ಆ ಜನ ನಮ್ಮ ಸರಕಾರಿ ಕೆಲಸಕ್ಕೆ ಅಡ್ಡಿ ಪಡಿಸಿದರು.

ನಾನು ಕೊಟ್ಟಂತಹ ದೂರನ್ನು ಈಗ ನೋಡುತ್ತಿದ್ದೇನೆ , ಅರದಲ್ಲಿ ನನ್ನ ಸಹಿ ಇದೆ ಅದನ್ನು ನಿ.ಪಿ -1 ಎಂದು ಸಾಕ್ಷಿಯ ಸಹಿ ನಿ.ಪಿ1(ಎ) ಎಂದು ಗುರುತಿಸಲಾಯಿತು. ಸದರಿ ದೂರನ್ನು ನಮ್ಮ ಸಿಬ್ಬಂದಿ ಸುಜಿತ ಕುಲಕರ್ಣಿ ಮಾಡಿರುತ್ತಾರೆ.

ನ್ಯಾಯಾಲಯದ ಮುಂದೆ ಇರುವ ಕಲ್ಲುಗಳನ್ನು ಸಾಕ್ಷಿ ನೋಡಿ ಇದೇ ಕಲ್ಲುಗಳಿಂದ ಆ ಜನರು ನಮ್ಮ ವಾಹನಕ್ಕೆ ಕಲ್ಲು ಹೊಡೆದರು ಎಂದು ಹೇಳುತ್ತಾರೆ. ಸದರಿ ಕಲ್ಲುಗಳನ್ನು ಮು.ಮಾ.1 ರಿಂದ 6 ಎಂದು ಗುರುತಿಸಲಾಯಿತು .

ನ್ಯಾಯಾಲಯದ ಮುಂದೆ ಇರುವ 4 ಕಟ್ಟಿಗೆ ಬಡಿಗೆಗಳನ್ನು ಸಾಕ್ಷಿ ನೋಡಿ ಇದೇ ಬಡಿಗೆಗಳಿಂದ ಆ ಜನರು ನಮ್ಮ ವಾಹನಕ್ಕೆ ಒಗೆದರು ಎಂದು ಹೇಳುತ್ತಾರೆ. ಸದರಿ ಬಡಿಗೆಗಳನ್ನು ಮು.ಮಾ.7 ರಿಂದ 10 ಎಂದು ಗುರುತಿಸಲಾಯಿತು .

ಮರುದಿನ ಯಮಕನಮರಡಿ ಪಿ ಎಸ್ ಐ ಅವರು ನಮ್ಮನ್ನು ಕರೆಸಿ ಅಪರಾಧ ನಡೆದ ಜಾಗ ತೋರಿಸಲು ಹೇಳಿದರು. ಅಲ್ಲಿ ಇಬ್ಬರು ಪಂಚರು ಬಂದಿದ್ದರು. ಅವರ ಹೆಸರು ವಿಶಾಲ ಮಾನೆ ಹಾಗೂ ಸಾಗರ ಮಗದುಮ ಇದ್ದರು. ಅವರು ಸಮಕ್ಷಮ ಪೋಲಿಸರು ಅಪರಾಧ ನಡೆದ ಸ್ಥಳದ ಪಂಚನಾಮೆ ನಮ್ಮ ಸಮಕ್ಷಮ ಬೆಳಿಗ್ಗೆ 10-00 ರಿಂದ 11-00 ಗಂಟೆ ವರೆಗೆ ಮಾಡಿದರು. ಆ ಸಮಯದಲ್ಲಿ ಪಂಚನಾಮೆ ಬರೆದು ಅಲ್ಲಿ ಫೋಟೊ ತೆಗೆದುಕೊಂಡರು.

ಸದರಿ ಪಂಚನಾಮೆಯನ್ನು ನಿ.ಪಿ-2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಅಲ್ಲಿ ತೆಗೆದ ಫೋಟೊವನ್ನು ತಕರಾರಿಗೊಳಪಟ್ಟು ನಿ.ಪಿ-3 ಎಂದು ಗುರುತಿಸಲಾಯಿತು.

ನಂತರ ಅಲ್ಲಿಂದ ನಾವು ಯಮಕನಮರಡಿ ಪೋಲಿಸ ಠಾಣೆಗೆ ವಾಪಸ ಬಂದೆವು. ಅಲ್ಲಿ ನಮ್ಮ ಜಖಂ ಆದ ವಾಹನದಂ ಪಂಚನಾಮೆಯನ್ನು ಪಂಚರಾದ ಇಮ್ರಾನ ಐನಾಪೂರೆ ಹಾಗು ಅಜರುದ್ದೀನ ಮುಜಾವರ ಇವರ ಸಮಕ್ಷಮ ವಾಹನದ ಪಂಚನಾಮೆ ಮಾಡಿ ಫೋಟೊ ತೆಗೆದರು. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1 ರಿಂದ 2 ಗಂಟೆ ವರೆಗೆ ಮಾಡಿದರು.

ಸದರಿ ವಾಹನ ಪಂಚನಾಮೆಯನ್ನು ನಿ.ಪಿ-4 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ಹಾಗೂ ಅಂದು ತೆಗೆದ ಫೋಟೊವನ್ನು ನಿ.ಪಿ-5 ಮತ್ತು 6 ಎಂದು ಗುರುತಿಸಲಾಯಿತು. ವಾಹನವನ್ನು ನಾವು ನಂತರ ನಮ್ಮ ಕೆಲಸಕ್ಕೆ ಬೇಕಾಗಿದ್ದರಿಂದ ನಾವು ತೆಗೆದುಕೊಂಡು ಹೋದೆವು.

ಮರು ದಿನ ಪೋಲಿಸರು ನಮ್ಮನು ಪುನಃ ಠಾಣೆಗೆ ಕರೆಸಿದರು. ಅಲ್ಲಿ 6 ಜನ ಆರೋಪಿತರು ಇದ್ದರು. ಪೋಲಿಸರನ್ನು ಅವರ ಹೆಸರನ್ನೂ ಸಹ ನಮಗೆ ತಿಳಿಸಿದರು. ಅಲ್ಲಿದ್ದಂತಹವರು ಆ ದಿನ ನಮಗೆ ಕರ್ತವ್ಯಕ್ಕೆ ಅಡ್ಡಿ ಪಡಿಸಿ ಕಲ್ಲು ಒಗೆದಂತಹವರು. ಅವರ ಹೆಸರು ನಾನು ಹೇಳಬಲ್ಲೆ . ಲಕ್ಷ್ಮಣ ಸಜಲಿ , ಸಾತಪ್ಪ ಪೂಜೇರಿ , ಸುರೇಶ ಬೆಂಡಿವಾಡಿ , ಮಾರುತಿ ಕಾಟಾಬಳಿ , ಕೆಂಪಣ್ಣಾ ಕಾಟಾಬಳಿ , ಗಂಗಪ್ಪ ಕಾಟಾಬಳಿ . ಅವರನ್ನು ನಾನು ನೋಡಿದರೆ ಗುರುತಿಸಬಲ್ಲೆ . ಆರೋಪಿತರು ಈ ದಿನ ಗೈರು ಹಾಜರ ಆಗಿದ್ದು , ಅವರನ್ನು ಗುರುತಿಸುವ ಬಗ್ಗೆ ತಕಾರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ನಾನು ಪೋಲಿಸರ ಮುಂದೆ ಮರು ಹೇಳಿಕೆ ಕೊಟ್ಟಿದ್ದು ಅದರಲ್ಲಿ ಈ ಮೇಲೆ ಹೇಳಿದ 6 ಜನ ಆರೋಪಿತರು ಮಾತ್ರ ಇದ್ದರು ಎಂದು ಹೇಳಿರುತ್ತೇನೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್ ಬಿ ಸಿ ವಕೀಲರಿಂದ -**

**(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**